<u>ದಿನಾಂಕಃ **12/11/2024** ರಂದು ಅಸಾಃ **1** ರವರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>**ಪಾಟೀ ಸವಾಲು:** ಆರೋಪಿ ಪರ ಶ್ರೀ ಎಸ್ ಪಿ ಎ ವಕೀಲರಿಂದಃ</u>

ಆಲೂರಿನಿಂದ ನಮ್ಮ ಊರಿಗೆ 18 ಕಿ.ಮೀ ಆಗುತ್ತದೆ. ನಮ್ಮ ಊರಿನಲ್ಲಿ ಸುಮಾರು 100 ಮನೆಗಳಿವೆ ಎಂದರೆ ಸರಿ. ನಮ್ಮ ಊರಿನಿಂದ ಹೊನ್ನೇನಹಳ್ಳಿ ಗೇಟ್ 2-3 ಕಿ.ಮೀ ಆಗುತ್ತದೆ. ನನ್ನ ಮಗಳು ದ್ವಿತೀಯಾ ಪಿಯುಸಿಯನ್ನು ಆಲೂರಿನಲ್ಲಿ ಓದುತ್ತಿದ್ದಳು. ಅವರಳು ಬಸ್ಸಿನಲ್ಲಿ ಓಡಾಡುತ್ತಿದ್ದಳು. ನಮ್ಮ ಊರಿನಿಂದ ಇಬ್ಬರು ಕಾಲೇಜಿಗೆ ಹೋಗುತ್ತಿದ್ದರು. ಪಕ್ಕದ ಊರಿನಿಂದಲೂ ಮಕ್ಕಳು ಕಾಲೇಜಿಗೆ ಹೋಗುತ್ತಿದ್ದರು. ನಮ್ಮ ಊರಿನಿಂದ ಕಾಲೇಜಿಗೆ ಹೋಗಬೇಕಾದರೆ ಬಸ್ಸಿನಿಂದಲೇ ಹೋಗಬೇಕಾಗುತ್ತದೆ. ನಮ್ಮ ಊರಿನಿಂದ ಬಸ್ಸು ಇರುವುದಿಲ್ಲ. ಭಕ್ತರಹಳ್ಳಿ ಕ್ರಾಸಿಗೆ ನಡೆದುಕೊಂಡು ಹೋಗಬೇಕಾಗುತ್ತದೆ.

2. ಎಡೆನಹಳ್ಳಿಯ ಹತ್ತಿರ ಭಕ್ತರಹಳ್ಳಿ ಕ್ರಾಸ್ ಬರುತ್ತದೆ. ಸಂಜೆ ನಮ್ಮ ಊರಿಗೆ ಜನರು ಬಂದು ಹೋಗುತ್ತಿರುತ್ತಾರೆ ಎಂದರೆ ಸರಿ. ನಮ್ಮ ಊರಿಗೆ ಬರಬೇಕಾದರೆ ಸುತ್ತಮುತ್ತಲು ಹೊಲಗಳು ಇವೆ ಎಂದರೆ ಸರಿ. ಹೊಲದಲ್ಲಿ ಜೋಳ ಬೆಳೆದಿರುತ್ತಾರೆ ಎಂದರೆ ಸರಿ. ಹೊಲದಲ್ಲಿ ಜನರು ಕೆಲಸ ಮಾಡುತ್ತಿರುತ್ತಾರೆ, ದನಗಳನ್ನು ಮೇಯಿಸುತ್ತಿರುತ್ತಾರೆ ಎಂದರೆ ಸರಿ. ಸಾಕ್ಷಿ ಸ್ವಇಚ್ಛೆಯಿಂದ ಸಂಜೆ 4.00 ಗಂಟೆಗೆ ಮನೆಗೆ ಹೋಗುತ್ತಾರೆ ಎಂದು ನುಡಿಯುತ್ತಾರೆ.

3. ಕೃತ್ಯ ನಡೆದ ಸ್ಥಳ ನಮ್ಮ ಊರಿನಿಂದ ಒಂದು ಕಿ.ಮೀ ಆಗುತ್ತದೆ. ಗಲಾಟೆಯಾದ ಸಮಯದಲ್ಲಿ ನನ್ನ ಹತ್ತಿರ ಫೋನ್ ಇತ್ತು. ಗಲಾಟೆಯಾದ ಬಗ್ಗೆ ಪೂಜಾ ತಿಳಿಸಿದಳು. ಪೂಜಾ ಅವರ ಮನೆ ಭಕ್ತರಹಳ್ಳಿಯಲ್ಲಿ ಇರುತ್ತದೆ. ಕೃತ್ಯ ನಡೆದ ಬಗ್ಗೆ ಸಂಜೆ 5.30-6.00 ಗಂಟೆಗೆ ನನಗೆ ಗೊತ್ತಾಗಿರುತ್ತದೆ. ನನ್ನ ಮಗ ಕೂಲಿ ಕೆಲಸ ಸಿಕ್ಕಿದ ಕಡೆ ಹೋಗುತ್ತಾನೆ. ಅವನು ಸಿಟಿ ಕಡೆ ಕೆಲಸಕ್ಕೆ ಹೋಗುತ್ತಾನೆ ಎಂದರೆ ಸರಿ. ನನ್ನ ಇನ್ನೊಬ್ಬ ಮಗಳು ಹಾಸನದಲ್ಲಿ ಓದುತ್ತಿದ್ದಳು. ನನ್ನ ಮಗ ಹಾಗೂ

ಹಾಸನದಲ್ಲಿ ಓದುವ ಮಗಳ ಕೈಯಲ್ಲಿ ಕೂಡ ಮೊಬೈಲ್ ಇತ್ತು ಎಂದರೆ ಸರಿ. ಅಶ್ವಿನಿ ಹತ್ತಿರ ಮೊಬೈಲ್ ಫೋನ್ ಇತ್ತು ಎಂದರೆ ಸರಿಯಲ್ಲ.

4. ಪೂಜಾ ರವರ ಫೋನ್ ಬಂದ ನಂತರ ನಾನು ಒಬ್ಬನೇ ಅವರ ಮನೆಗೆ ಹೋಗಿರುತ್ತೇನೆ. ಅಲ್ಲಿ ಪೂಜಾ ರವರು ಫೋನ್ ಮಾಡಿ ನಿಮ್ಮ ಮಗಳು ನಮ್ಮ ಮನೆಯಲ್ಲಿದ್ದಾಳೆ ಎಂದು ಹೇಳಿರುತ್ತಾರೆ. ನಾನು ಈ ವಿಚಾರವನ್ನು ಬೇರೆಯವರಿಗೆ ತಿಳಿರುವುದಿಲ್ಲ. ನಂತರ ಮನೆಗೆ ಹೋದ ಮೇಲೆ ನನಗೆ ಕೃತ್ಯದ ಬಗ್ಗೆ ಪೂಜಾ ತಿಳಿಸಿರುತ್ತಾರೆ. ನಾನು ಈ ವಿಚಾರವನ್ನು ನಮ್ಮ ಊರಿನ ದೇವರಾಜೇಗೌಡರ ರವರಿಗೆ ಪೂಜಾ ರವರ ಮನೆಯಲ್ಲಿ ತಿಳಿಸಿರುತ್ತೇನೆ. ಮತ್ತೆ ಬೇರೆ ಯಾರಿಗೂ ತಿಳಿಸಲು ಹೋಗಿಲ್ಲ, ದೂರನ್ನು ಕೊಟ್ಟಿರುತ್ತೇನೆ. ದೂರನ್ನು ಗಲಾಟೆಯಾದ ಮರುದಿನ ಕೊಟ್ಟಿರುತ್ತೇನೆ.

5. ಅದೇ ದಿನ ದೂರನ್ನು ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ, ರಾತ್ರಿಯೇ ನಾನು ಠಾಣೆಗೆ ಹೋಗಿರುತ್ತೇನೆ, ಅಲ್ಲಿ ಎಲ್ಲಾ ಬರೆಸಿಕೊಂಡು ಮರುದಿನ ಬರೆಸಿಕೊಂಡಿರುತ್ತಾರೆ. ನಾನು ಮರುದಿನ ಠಾಣೆಗೆ ಹೋಗಿರುತ್ತೇನೆ. ದೂರು ಕೊಡಲು ನನ್ನ ಜೊತೆ ಸುಮಾರು 5-6 ಜನರು ಬಂದಿದ್ದರು, ಅವರ ಹೆಸರು ಈಗ ನನಗೆ ಗೊತ್ತಿಲ್ಲ. ನನ್ನ ಮಗಳು ಕಾಲೇಜು ಮುಗಿಸಿಕೊಂಡು, ಹೊಲದಲ್ಲಿ ಬೆಳೆದಿದ್ದ ಜೋಳವನ್ನು ಕೀಳಲು ಹೋದಾಗ, ಹೊಲದ ಮಾಲೀಕರು ಕೂಗಾಡಿದ್ದರಿಂದ, ಗಾಬರಿಯಿಂದ ಓಡಿ ಬಿದ್ದು ಪೊದೆಯಿಂದ ಅವಳ ಕೈ ಕಾಲು ತರಚಿದ್ದು, ಇದನ್ನು ಮನೆಯಲ್ಲಿ ಹೇಳಲು ಹೆದರಿ, ಆರೋಪಿಯ ಮೇಲೆ ಸುಳ್ಳು ಕಥೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೂ ನನಗೂ ಹಣ ಕಾಸಿನ ವ್ಯವಹಾರದಲ್ಲಿ ವೈಯಕ್ತಿಕ ದ್ವೇಷದಿಂದ ನಾನೇ ಅವನ ಮೇಲೆ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

6. ಆರೋಪಿಯು ನನ್ನ ಮಗಳ ಮೇಲೆ ಮಾನಭಂಗಕ್ಕೆ ಪ್ರಯತ್ನಪಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಖ್ಯ

ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಪ್ರ

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ